ಎಕ್ಸ್‌ಪ್ಲನೇಶನ್' ಆತ ನಿಜಕ್ಕೂ ಹೆದರಿದ್ದ. ತರತರ ನಡುಗುತ್ತಿದ್ದ. ಮನೆಯಲ್ಲಿ ಯಾರನ್ನೋ ಹುಡುಕುತ್ತಿದ್ದ.

ಮನು ರಿಮೋಟ್ ತರಲು ಒಳಗೆ ಹೋದ. ಆದರೆ... ಎದುರು ಕಂಡಿದ್ದು ನೋಡಿ ನಿಂತಲ್ಲೇ ಕುಸಿಯುವಂತಾಯಿತು!!

ಆ ಸುರಸುಂದರಿ, ಕಮಲಾ ರೊಬೊ ಎರಡೂ ಕೈಗಳಲ್ಲಿ ದೊಡ್ಡ ಚಾಕುಗಳನ್ನು ಹಿಡಿದು ಇವರತ್ತ ಬರುತ್ತಿತ್ತು! ಕಣ್ಣುಗಳು ಕೋಪದಿಂದ ನಿಗಿನಿಗಿ ಹೊಳೆಯುತ್ತಿದ್ದವು!

'ಐ ವಿಲ್ ಕಿಲ್ ಯೂ... ಐ ವಿಲ್ ಕಿಲ್ ಯೂ' ಎಂದು ಹೂಂಕರಿಸುತ್ತಿತ್ತು!! ಕೆಲವೇ ನಿಮಿಷಗಳ ಹಿಂದೆ 'ಲಾಲಿ ಹಾಡಿ ಮಲಗಿಸುತ್ತೇನೆ ಬಾ' ಎಂದಿದ್ದ, ತನ್ನ ಮನ ಗೆದ್ದಿದ್ದ ರೊಬೊ ಇದೇನೇ ಎಂದು ನಂಬಲು ಸಾಧ್ಯವಿಲ್ಲದ ಅವತಾರದಲ್ಲಿ!!

'ಪ್ರೋಗ್ರಾಮಿನಲ್ಲಿ ಬಗ್ ಇದೆ. ಅದಕ್ಕೇ ಇದು ಹೀಗೆ ವರ್ತಿಸುತ್ತಿದೆ. ಬೇಗನೆ ರಿಮೋಟ್ ತಾ...' ಜಾಕೋಬ್ ಬಾಗಿಲ ಬಳಿ ಆತುರದಿಂದ ಕಿರುಚುತ್ತಿದ್ದರು.

ರೊಬೊ ಹತ್ತಿರ ಹತ್ತಿರ ಬರುತ್ತಿತ್ತು. ಒಂದೊಂದೇ ಹೆಜ್ಜೆ... ಇನ್ನೇನು ಅದು ತನ್ನನ್ನು ತಿವಿಯಬೇಕು ಅಷ್ಟರಲ್ಲಿ ಯಾರೋ ಹಿಂದಕ್ಕೆಳೆದರು.

ಮನು ಆಯತಪ್ಪಿ ಬಿದ್ದ! ಎಚ್ಚರ ಕೂಡ ತಪ್ಪಿತು. ಕಣ್ಣು ಕತ್ತಲಿಟ್ಟಿತು!!

'ಏಳು... ಏಳು ಮನು...' ಯಾರೋ ಅಲುಗಾಡಿಸಿ ಎಬ್ಬಿಸುತ್ತಿದ್ದರು. ಅಂದರೆ ತಾನು ಸತ್ತಿಲ್ಲ! ರೊಬೊ ಏನಾಯಿತು? ಜಾಕೋಬ್... ಎಲ್ಲಿಗೆ ಹೋದರು?

ಮನು ಕಣ್ಣು ಬಿಟ್ಟ. ತಾಯಿ ಎಬ್ಬಿಸುತ್ತಿದ್ದರು!!

'ಇವತ್ತು ಪ್ರಾಜೆಕ್ಟ್ ವೈವಾ ಇದೆ ಎನ್ನುತ್ತಿದ್ದೆ... ಏಳೋದಿಲ್ಲವಾ?' ಆಕೆಯ ಮಾತು ಕೇಳಿ ಅಚ್ಚರಿಯಾಯಿತು! ಅಮೆರಿಕ? ರೊಬೊ?... ಜಾಕೋಬ್?...

'ಯಾಕೋ ಗಾಬರಿಯಾಗಿದ್ದೀಯ?... ಕೆಟ್ಟ ಕನಸು ಬಿತ್ತೆ? ಎದೆ ಮೇಲೆ ಪುಸ್ತಕ ಇಟ್ಕೊಂಡೇ ಮಲಗಿಬಿಟ್ಟಿದ್ದೀಯ.'

ತಾಯಿಯ ಮಾತಿಗೆ ನಾಚಿ ಎದ್ದ ಮನು. ಎದೆಯ ಮೇಲಿದ್ದ ಭಾರವಾದ 'ಭವಿಷ್ಯದಲ್ಲಿ ರೊಬೊಗಳು' ಎನ್ನುವ ಪುಸ್ತಕದ ಜೊತೆಯಲ್ಲಿಯೇ ಅವನು ನಿದ್ರಿಸಿದ್ದ!!


### ಎಸ್.ಜಿ. ಶಿವಶಂಕರ್

ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲಿ ಎರಡೂವರೆ ದಶಕಗಳಿಗಿಂತಲೂ ಹೆಚ್ಚುಕಾಲ ಎಂಜಿನಿಯರ್ ಆಗಿದ್ದ ಶಿವಶಂಕರ್, ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಮೈಸೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಬರವಣಿಗೆ, ನಾಟಕ ರಚನೆ, ನಿರ್ದೇಶನ, ನಟನೆ, ವಚನ ಸಾಹಿತ್ಯ ಮತ್ತು ವಿಜ್ಞಾನದಲ್ಲಿ ವಿಶೇಷ ಆಸಕ್ತಿ. ನಾಲ್ಕು ಕಾದಂಬರಿಗಳು, ತಲಾ ಎರಡು ಕತೆ, ಕವನ, ಹಾಸ್ಯ ಲೇಖನಗಳ ಸಂಕಲನಗಳು, 12 ನಾಟಕಗಳು ಪ್ರಕಟವಾಗಿವೆ.